REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 21 । ಆಗಸ್ಟ್ 30, 2023 । ಬುಧವಾರ । ಪುಟಗಳು : 8 । ಬೆಲೆ : 2/-

## ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ನಿರ್ದೇಶಕರುಗಳಿಗೆ ಹಾಗೂ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರುಗಳಿಗೆ ಮತ್ತು ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ವಿಜಯಪುರದಲ್ಲಿ ಒಂದು ದಿನದ ವಿಚಾರ ಸಂಕಿರಣ



**ವಿಜಯಪುರ** : ದಿನಾಂಕ : 26.08.2023ರಂದು ವಿಜಯಪುರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ನಿರ್ದೇಶಕರುಗಳಿಗೆ ಹಾಗೂ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರುಗಳಿಗೆ ಮತ್ತು ಮಹಿಳಾ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಶೇಷ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು.

ಈ ವಿಚಾರ ಸಂಕಿರಣವನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು ಉದ್ಘಾಟಿಸಿ ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳು ಅದರಲ್ಲಿ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳು ಕರ್ನಾಟಕದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಮಹಿಳಾ ಬ್ಯಾಂಕುಗಳು ಮಹಿಳಾ ಸದಸ್ಯರುಗಳನ್ನು ಮಾತ್ರ ಹೊಂದಿ ಮಹಿಳೆಯರಿಗೆ ವಿವಿಧ ರೀತಿಯ ಸಾಲಗಳನ್ನು ನೀಡಿ ಉತ್ತಮ ವಸೂಲಾತಿಯನ್ನು ಮಾಡಿಕೊಂಡು ಬರುತ್ತಿವೆ. ರಿಜರ್ವ್ ಬ್ಯಾಂಕು ಎಷ್ಟೇ ಕಠಿಣ ನಿರ್ದೇಶನಗಳನ್ನು ಹೊರಡಿಸಿದರು ಅವುಗಳನ್ನು ಚಾಚು ತಪ್ಪದೇ ನಿರ್ವಹಿಸಿ ಸಾಧನೆಯಲ್ಲಿ ಮೈಲುಗಲ್ಲು ಸಾಧಿಸುತ್ತಿವೆ ಎಂದು ವಿವರಿಸಿದರು.

ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ರವರು ಮಾತನಾಡಿ ನಮ್ಮ ಮಹಿಳಾ ಸಹಕಾರ ಬ್ಯಾಂಕುಗಳು ಯಾವ ಪುರುಷರಿಗೆ ಕಡಿಮೆ ಇಲ್ಲದಂತೆ ಬ್ಯಾಂಕಿನ ವಹಿವಾಟುಗಳನ್ನು ನಡೆಸಿ ಉತ್ತಮವಾದ ಸಾಧನೆ ಮಾಡುತ್ತಿವೆ. ಆದರೆ ಇತ್ತೀಚೆಗೆ ಭಾರತೀಯ ರಿಜರ್ವ್ ಬ್ಯಾಂಕ್ ಕಠಿಣ ನಿರ್ದೇಶನಗಳನ್ನು ಹೊರಡಿಸುತ್ತಿರುವುದರಿಂದ ಅವುಗಳನ್ನು ಜಾರಿಗೆ ತರಬೇಕಾದರೆ ನಮ್ಮ ನೌಕರರ ಸಾಮರ್ಥ್ಯ ಮತ್ತು ತಾಂತ್ರಿಕತೆ ಅಷ್ಟೊಂದು ಉತ್ತಮವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಕೂಡಲೇ ಹೊಸ ತಂತ್ರಾಂಶಗಳನ್ನು ಅಳವಡಿಸಿಕೊಂಡು ತನ್ನ ಗ್ರಾಹಕರಿಗೆ ಉತ್ತಮ ಸೇವೆ ನೀಡುವಂತಾಗಬೇಕು ಎಂದರು.

ಆಡಳಿತ ಮಂಡಳಿ ಸದಸ್ಯರು ದಿನನಿತ್ಯದ ವ್ಯವಹಾರಗಳಿಗೆ ಮಧ್ಯಸ್ಥಿಕೆ ವಹಿಸದೇ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಪೂರ್ಣ ಜವಾಬ್ದಾರಿ ವಹಿಸಿ ಮೇಲ್ವಿಚಾರಣೆಯನ್ನು ಮಾತ್ರ ಮಾಡಬೇಕೆಂದರು. ಎಲ್ಲಾ ಸಿಬ್ಬಂದಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸಿದರೆ ಬ್ಯಾಂಕಿನ ಬೆಳವಣಿಗೆಗಳು ಆಗುತ್ತವೆ ಎಂದರು.

ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ. ರವರು ಮಾತನಾಡಿ ಮಹಿಳಾ ಬ್ಯಾಂಕುಗಳಿಗೆ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರ / ಭಾರತೀಯ ರಿಜರ್ವ್ ಬ್ಯಾಂಕ್ ಈವರೆಗೆ ವಿನಾಯಿತಿಗಳನ್ನು ನೀಡಿರುವುದಿಲ್ಲ. ಮಹಿಳಾ ಬ್ಯಾಂಕುಗಳಿಗೆ ಕಡಿಮೆ ಬಡ್ಡಿದರದಲ್ಲಿ ನಬಾರ್ಡ್ ಅಥವಾ ಡಿ.ಸಿ.ಸಿ ಬ್ಯಾಂಕುಗಳ ಮೂಲಕ ವಿಶೇಷ ಸಾಲ ಸೌಲಭ್ಯಗಳನ್ನು ನೀಡಿದರೆ ನಮ್ಮ ಸದಸ್ಯರಿಗೆ ವಿಶೇಷ ಯೋಜನೆಗಳನ್ನು ರೂಪಿಸಿ ಮಹಿಳೆಯರಿಗೆ ಸಾಲಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎಂದರು. ರಾಜ್ಯದ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿ ಸಂಘಗಳು ಬ್ಯಾಂಕಿಂಗ್ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದು, ಈ ಸಂಘಗಳು ಸಹಕಾರ ಬ್ಯಾಂಕುಗಳಂತೆ ತನ್ನ ಗ್ರಾಹಕರಿಂದ ಠೇವಣಿ ಪಡೆದು ಸದಸ್ಯರುಗಳಿಗೆ ಎಲ್ಲಾ ರೀತಿಯ ಸಾಲ ಸೌಲಭ್ಯ ಒದಗಿಸುತ್ತಿವೆ.

3ನೇ ಪುಟಕ್ಕೆ...

2 ಸೆಪ್ಟೆಂಬರ್ 1 ರಿಂದ ಕೆಲ ರಾಜ್ಯಗಳಲ್ಲಿ ಜಿಎಸ್‌ಟಿ ಬಹುಮಾನ ಯೋಜನೆ ಜಾರಿ

4 ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿಗೆ ಸರ್ವತೋಮುಖ ಅಭಿವೃದ್ಧಿಗಾಗಿ ಸಾಧನಾ ಪ್ರಶಸ್ತಿ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಹಕಾರ ಸಂಸ್ಥೆಗಳೂ ಆಸಕ್ತಿ ವಹಿಸಲಿ

ನಮ್ಮಲ್ಲಿ ದೇಶ ಸುತ್ತಿ ನೋಡು, ಕೋಶ ಓದಿ ನೋಡು ಎನ್ನುವ ಗಾದೆ ಮಾತಿದೆ. ಇದರರ್ಥ ದೇಶ ತಿರುಗಿದರೆ ಲೋಕಜ್ಞಾನ ದೊರೆಯುತ್ತದೆ ಹಾಗೂ ಕೋಶ ಓದಿದರೆ ವಿಷಯ ಜ್ಞಾನ ದೊರೆಯುತ್ತದೆ ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ದೇಶದ ವಿವಿಧ ಭಾಗಗಳಿಗೆ ಪ್ರವಾಸ ಹೋದಂತೆ ನಮಗೆ ಅಲ್ಲಿನ ಜನರ ಭಾಷೆ, ಆಚಾರ ವಿಚಾರ, ಪದ್ಧತಿಗಳು, ಹಬ್ಬ ಆಚರಣೆಗಳು, ಜನರ ನಡುವಳಿಕೆ ಬಗ್ಗೆ ಅರಿವು ಉಂಟಾಗುತ್ತದೆ. ಹಾಗೆಯೇ, ನಾವು ಕೋಶ ಓದುತ್ತಾ ಹೋದಂತೆ ನಮಗೆ ಜ್ಞಾನದ ವಿವಿಧ ಶಾಖೆಗಳ, ವಿಷಯಗಳ ಬಗ್ಗೆ ತಿಳಿಯುತ್ತಾ ಹೋಗುತ್ತದೆ.

ಬರೀ ಪುಸ್ತಕದ ಜ್ಞಾನ ಪಡೆದವನು ಕೂಪ ಮಂಡೂಕನಾಗಿ ಬಿಡುವ ಸಂಭವವಿದೆ. ಅದರೊಂದಿಗೆ ದೇಶವನ್ನು ಸುತ್ತಿದಾಗ ಸಿಗುವ ಜ್ಞಾನದಿಂದ ಅವನು ಬೆಳೆಯುತ್ತಾನೆ. ಬೇಲೂರು, ಹಳೆಬೀಡು ಬಗ್ಗೆ ಪುಸ್ತಕದಲ್ಲಿ ಓದಿ ತಿಳಿಯುವುದಕ್ಕಿಂತಲೂ ಅಲ್ಲಿಗೆ ಪ್ರವಾಸ ಹೋಗಿ ನೋಡಿದಾಗ ಸಿಗುವ ಜ್ಞಾನ ಹೆಚ್ಚಿನದು. ಹೀಗೆ ಯಾವುದೇ ಸ್ಥಳದ ಪ್ರವಾಸ ಮಾಡಿದಾಗಲೂ ನಮಗೆ ಓದಿದ್ದಕ್ಕಿಂತ ಹೆಚ್ಚಿನ ಜ್ಞಾನ ಲಭಿಸುತ್ತದೆ. ಆ ಸ್ಥಳದ ಪರಿಸರ, ಹಿನ್ನೆಲೆ, ಅಲ್ಲಿನ ಮಳೆ-ಬೆಳೆ, ವಾತಾವರಣ ಎಲ್ಲವುದರ ಬಗ್ಗೆಯೂ ಅರಿವುಂಟಾಗುತ್ತದೆ. ಹೀಗೆ ಬುದ್ಧಿಯ ಬೆಳವಣಿಗೆಯಾಗಬೇಕಿದ್ದರೆ, ಓದಿನ ಜೊತೆಗೆ ವಿವಿಧ ಸ್ಥಳಗಳ ಪ್ರವಾಸ ಅನುಭವ ಪಡೆಯುವುದು ಹೆಚ್ಚಿನದು.

ಇದನ್ನೆಲ್ಲಾ ಇಲ್ಲಿ ಪ್ರಸ್ತಾಪಿಸಲು ಕಾರಣ: ಯಾವುದೇ ಪ್ರವಾಸವೆಂದರೇ ಬರೀ ಮೋಜಿನ ತಾಣಗಳಿಗೆ ಪ್ರವಾಸ ಮಾಡುವುದೇ ಆಗಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರವಾಸೋದ್ಯಮಕ್ಕೆ ನೂತನ ಆಯಾಮ ಕಲ್ಪಿಸಲು ಪ್ರವಾಸೋದ್ಯಮ ನೀತಿ ಜಾರಿಗೆ ತರಲು, ಪ್ರವಾಸೋದ್ಯಮ ಸಚಿವನಾಗಿ ನಾನು ಚಿಂತನೆ ನಡೆಸಿದ್ದೇನೆ. ರಾಜ್ಯದಲ್ಲಿ ಕೆಲವೇ ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ, ಪ್ರಾಕೃತಿಕ, ಪ್ರವಾಸಿ ಸ್ಥಳಗಳಿಗೆ ನಮ್ಮ ಜನ ಭೇಟಿ ನೀಡುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿರುವ ಇನ್ನೂ ಅನೇಕ ಅದ್ಭುತ ಪ್ರವಾಸಿ ತಾಣಗಳನ್ನು ನಾವು ನಿರ್ಲಕ್ಷಿಸಿದ್ದೇವೆ. ಈ ಕಾರಣಕ್ಕೆ ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮದಲ್ಲಿ ಎಲ್ಲ ಬಗೆಯ ಶೈಕ್ಷಣಿಕ, ಧಾರ್ಮಿಕ, ಸಾಹಸಿ, ಪರಿಸರ, ವನ್ಯಜೀವಿ, ಕರಾವಳಿ, ಅಧ್ಯಯನ ಒಳಗೊಂಡಂತೆ ಎಲ್ಲ ಅಲಕ್ಷಿತ ಕ್ಷೇತ್ರಗಳಿಗೂ ಆದ್ಯತೆ ನೀಡ ಬಯಸಿದ್ದೇನೆ.

ಪ್ರವಾಸೋದ್ಯಮ ಎನ್ನುವುದು ಆಕರ್ಷಣೀಯ ಮಾತ್ರವಲ್ಲ, ರಾಜ್ಯದ ಬೊಕ್ಕಸಕ್ಕೆ ಆದಾಯ ತರುವ ಪ್ರಮುಖ ಉದ್ಯಮವೂ ಆಗಿದೆ. ಕೃಷಿ, ನೇಕಾರಿಕೆ, ಕೈಗಾರಿಕೆ ಬಿಟ್ಟರೆ ಪ್ರವಾಸೋದ್ಯಮ ಹೆಚ್ಚು ಆದಾಯ ತಂದು ಕೊಡುವ ಮತ್ತು ಉದ್ಯೋಗ ಸೃಷ್ಟಿ ಮಾಡುವ ಕ್ಷೇತ್ರ.ವಾಗಿದೆ. ಈ ಹಿನ್ನೆಲೆಯಲ್ಲಿ ನೂತನ ಪ್ರವಾಸೋದ್ಯಮ ನೀತಿಯನ್ನು ಹಲವು ದೃಷ್ಟಿಕೋನಗಳನ್ನು ಗುರಿಯಾಗಿಟ್ಟುಕೊಂಡು ರೂಪಿಸಬಯಸಿದ್ದೇನೆ.

ನಮ್ಮಲ್ಲಿ ಕೆಲ ಸಹಕಾರ ಸಂಸ್ಥೆಗಳು ಪ್ರವಾಸೋದ್ಯಮ ಸಣ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ನಾನು ಬಲ್ಲೆ. ನಮ್ಮ ಸಹಕಾರ ಸಂಸ್ಥೆಗಳು ಕೂಡ ಸ್ಥಳೀಯವಾಗಿ ಕಾರ್ಪೋರೇಟ್ ಸಂಸ್ಥೆಗಳ ರೀತಿಯಲ್ಲಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಲ್ಲಿ ಉತ್ತಮ ಪ್ರಗತಿ ಸಾಧಿಸಬಹುದಾಗಿದೆ. ಈ ನಿಟ್ಟಿನಲ್ಲಿ ಯೋಚಿಸಲಿ...

ಎಚ್.ಕೆ. ಪಾಟೀಲ್

# ಸೆಪ್ಟೆಂಬರ್ 1 ರಿಂದ ಕೆಲ ರಾಜ್ಯಗಳಲ್ಲಿ ಜಿಎಸ್‌ಟಿ ಬಹುಮಾನ ಯೋಜನೆ ಜಾರಿ

**ನವದೆಹಲಿ :** ಆರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡು 10,000 ರೂಪಾಯಿಗಳಿಂದ 1 ಕೋಟಿ ರೂಪಾಯಿಯವರೆಗೆ ನಗದು ಬಹುಮಾನವನ್ನು ನೀಡುವ ಮೇರಾ ಬಿಲ್ ಮೇರಾ ಅಧಿಕಾರ್ ಇನ್‌ವಾಯ್ಸ್ ಪ್ರೋತ್ಸಾಹಕ ಯೋಜನೆಯನ್ನು ಸರ್ಕಾರವು ಸೆಪ್ಟೆಂಬರ್ 1 ರಿಂದ ಪ್ರಾರಂಭಿಸಲಿದೆ.

ಗ್ರಾಹಕರು ವಸ್ತುಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವಾಗ ಪ್ರತಿ ಬಾರಿ ಕಡ್ಡಾಯವಾಗಿ ರಸೀದಿ ಕೇಳುವಂತೆ ಮಾಡುವ ಗುರಿಯನ್ನು ಹೊಂದಿರುವ ಈ ಯೋಜನೆಯನ್ನು ಅಸ್ಸಾಂ, ಗುಜರಾತ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಪ್ರಾರಂಭಿಸಲಾಗುವುದು; ಪುದುಚೇರಿ, ದಮನ್ ಮತ್ತು ದಿಯು ಮತ್ತು ದಾದ್ರಾ ಮತ್ತು ನಗರ ಹವೇಲಿಯ ಕೇಂದ್ರೀಯ ಆಡಳಿತ ಪ್ರದೇಶಗಳಲ್ಲಿ ಸಹ ಜಾರಿಗೆ ತರಲಾಗುತ್ತಿದೆ ಎಂದು ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (CBIC) ತಿಳಿಸಿದೆ.

ಜಿಎಸ್‌ಟಿ ಇನ್‌ವಾಯ್ಸ್‌ಗಳ ಅಪ್‌ಲೋಡ್‌ನಲ್ಲಿ ನಗದು ಬಹುಮಾನಗಳನ್ನು ಗಳಿಸಲು ಇನ್‌ವಾಯ್ಸ್ ಇನ್ಸೆಂಟಿವ್ ಸ್ಕೀಮ್‌ನ್ನು ಜಾರಿಗೆ ತರಲಾಗುತ್ತಿದೆ ಎಂದು ಸಿಬಿಐಸಿ ಟ್ವೀಟ್ ಮಾಡಿದೆ. ಗ್ರಾಹಕರಿಗೆ ಸರಕು ಮತ್ತು ಸೇವಾ ತೆರಿಗೆ (GST) ನೋಂದಾಯಿತ ಪೂರೈಕೆದಾರರು ನೀಡಿದ ಎಲ್ಲಾ ಇನ್‌ವಾಯ್ಸ್‌ಗಳು 'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಗೆ ಅರ್ಹವಾಗಿರುತ್ತವೆ, ಇದರ ಅಡಿಯಲ್ಲಿ ಮಾಸಿಕ ಮತ್ತು ತ್ರೈಮಾಸಿಕ ಡ್ರಾಗಳನ್ನು ಮಾಡಲಾಗುತ್ತದೆ. ವಿಜೇತರು ನಗದು ಬಹುಮಾನಗಳಿಗೆ ಅರ್ಹರಾಗುತ್ತಾರೆ.

ಅದೃಷ್ಟದ ಡ್ರಾಗಾಗಿ ಪರಿಗಣಿಸಬೇಕಾದ ಇನ್‌ವಾಯ್ಸ್‌ನ ಕನಿಷ್ಠ ಖರೀದಿ ಮೌಲ್ಯವು 200 ರೂಪಾಯಿ ಆಗಿದೆ. ವ್ಯಕ್ತಿಗಳು ಸೆಪ್ಟೆಂಬರ್ 1 ರಿಂದ ಪ್ರಾರಂಭವಾಗುವ ತಿಂಗಳಲ್ಲಿ ಗರಿಷ್ಠ 25 ಇನ್‌ವಾಯ್ಸ್‌ಗಳನ್ನು ಅಪ್‌ಲೋಡ್ ಮಾಡಬಹುದು.

'ಮೇರಾ ಬಿಲ್ ಮೇರಾ ಅಧಿಕಾರ್' ಮೊಬೈಲ್ ಅಪ್ಲಿಕೇಶನ್ ಐಓಎಸ್ ಮತ್ತು ಆಂಡ್ರಾಯ್ಡ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಾಗಲಿದೆ. ಅಪ್ಲಿಕೇಶನ್‌ನಲ್ಲಿ ಅಪ್‌ಲೋಡ್ ಮಾಡಿದ ಇನ್‌ವಾಯ್ಸ್ ಮಾರಾಟಗಾರರ GSTIN, ಇನ್‌ವಾಯ್ಸ್ ಸಂಖ್ಯೆ, ಪಾವತಿಸಿದ ಮೊತ್ತ ಮತ್ತು ತೆರಿಗೆ ಮೊತ್ತವನ್ನು ಹೊಂದಿರಬೇಕು. ವ್ಯಾಪಾರದಿಂದ ಗ್ರಾಹಕನಿಗೆ ಸರಕುಗಳು ಅಥವಾ ಸೇವೆಗಳ ಖರೀದಿಗಳನ್ನು ಮಾಡುವಾಗ ಮಾರಾಟಗಾರರಿಂದ ಇನ್‌ವಾಯ್ಸ್‌ಗಳನ್ನು ಕೇಳಲು ನಾಗರಿಕರು ಮತ್ತು ಗ್ರಾಹಕರನ್ನು ಉತ್ತೇಜಿಸುವ ರೀತಿಯಲ್ಲಿ ಈ ಯೋಜನೆಯನ್ನು ಪರಿಕಲ್ಪನೆ ಮಾಡಲಾಗಿದೆ.

... 1ನೇ ಪುಟದಿಂದ



ಈ ಸಹಕಾರ ಸಂಘಗಳು / ಸೌಹಾರ್ದ ಸಹಕಾರ ಸಂಘಗಳು SLR / Non SLR ಹೂಡಿಕೆಗಳು, CRAR, NPA ಇವುಗಳನ್ನು ನಿರ್ವಹಿಸಲು ಯಾವ ಷರತ್ತುಗಳು ರಾಜ್ಯ ಸರ್ಕಾರದ ಮತ್ತು ರಿಜರ್ವ್ ಬ್ಯಾಂಕಿನಿಂದ ಇರುವುದಿಲ್ಲ. ಅದರ ಜೊತೆಗೆ ಆದಾಯ ತೆರಿಗೆ, ಟಿ.ಡಿ.ಎಸ್ ಸಹ ಇವುಗಳಿಗೆ ವಿನಾಯಿತಿ ಇರುತ್ತದೆ. ಸಹಕಾರ ಸಂಘ / ಸೌಹಾರ್ದ ಸಹಕಾರಿ ಸಂಘಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ / ಭಾರತೀಯ ರಿಜರ್ವ್ ಬ್ಯಾಂಕಿನಿಂದ ನಿರ್ಬಂಧ ಇಲ್ಲದಿರುವುದರಿಂದ ಇವು ವೇಗವಾಗಿ ಬೆಳೆಯುತ್ತಿವೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳಿಗೂ ಸಹ ಈ ರೀತಿ ಸೌಲಭ್ಯಗಳನ್ನು ಒದಗಿಸಿದರೆ ಮಾತ್ರ ನಾವು ಉತ್ತಮ ಬೆಳವಣಿಗೆ ಕಾಣಲು ಸಾಧ್ಯ ಎಂದು ಸಭೆಗೆ ವಿವರಿಸಿದರು.

ಈ ವಿಚಾರ ಸಂಕಿರಣದಲ್ಲಿ ಕಾರ್ಪೋರೇಟ್ ಗವರ್ನನ್ಸ್ ಕುರಿತು ಆರ್‌ಬಿಐ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು, ಡಿಜಿಟಲ್ ಅಂಡ್ ಫೈನಾನ್ಸ್ ಟೆಕ್ನಾಲಜಿ ಕುರಿತು ಮನ್ನ ದೇಶಿ ಮಹಿಳಾ ಸಹಕಾರಿ ಬ್ಯಾಂಕ್ ಮಹಾಸ್ವಾಡದ ಶ್ರೀಮತಿ ರೇಖಾ ಕುಲಕರ್ಣಿ ರವರು, ರೋಲ್ ಆಫ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಮತ್ತು ವುಮೆನ್ಸ್ ಎಂಪವರ್‌ಮೆಂಟ್ ಕುರಿತು ಮಹಾಮಂಡಳದ ನಿರ್ದೇಶಕರು ಹಾಗೂ ಚೈತನ್ಯ ಮಹಿಳಾ ಸಹಕಾರ ಬ್ಯಾಂಕ್ ನಿ., ವಿಜಯಪುರ ಇದರ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ರವರು, ಬ್ಯುಸಿನೆಸ್ ಡೆವಲಪ್‌ಮೆಂಟ್ ಕುರಿತು ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ರವರು ಉಪನ್ಯಾಸ ನೀಡಿದರು.

ಈ ವಿಚಾರ ಸಂಕಿರಣದಲ್ಲಿ ಮುಖ್ಯಅತಿಥಿಗಳಾಗಿ ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಶರಣಪ್ಪ ಎಸ್. ವಾರದ ಭಾಗವಹಿಸಿದ್ದರು. ಪ್ರಾರಂಭದಲ್ಲಿ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಮಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 150ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.

## ದಿನಾಂಕ : 20.09.2023ರಂದು ಮಹಾಮಂಡಳದ 58ನೇ ವಾರ್ಷಿಕ ಮಹಾಸಭೆ

**ಬೆಂಗಳೂರು :** ಮಹಾಮಂಡಳದ 2022-23ನೇ ಸಾಲಿನ 58ನೇ ವಾರ್ಷಿಕ ಮಹಾಸಭೆಯನ್ನು 20ನೇ ಸೆಪ್ಟೆಂಬರ್ 2023ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಮಹಾಮಂಡಳದ ಕೆ.ಎಚ್.ಪಾಟೀಲ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸಭೆಗೆ ಮಹಾಮಂಡಳದ ಅರ್ಹ ಸದಸ್ಯ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಬೇಕಾಗಿ ವಿನಂತಿ. ಒಂದು ಸದಸ್ಯ ಬ್ಯಾಂಕಿನಿಂದ ಒಬ್ಬ ಪ್ರತಿನಿಧಿಗೆ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

## ಇಳಕಲ್ ಕೋ-ಆಪರೇಟಿವ್ ಬ್ಯಾಂಕ್ : ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



ಅರವಿಂದ ಬಸಪ್ಪ ಮಂಗಳೂರ

**ಅಧ್ಯಕ್ಷರು**

**ಇಳಕಲ್ :** ಇತ್ತೀಚೆಗೆ ಜರುಗಿದ ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆಯನ್ನು ಶ್ರೀ ಬಿ.ಎನ್. ಪೊಲೀಸಪಾಟೀಲ ರಿಟರ್ನಿಂಗ್ ಆಫೀಸರ್ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ಹುನಗುಂದ ಇವರು ಜರುಗಿಸಿದರು. ಬ್ಯಾಂಕಿನ ಅಧ್ಯಕ್ಷರಾಗಿ ಅರವಿಂದ ಬಸಪ್ಪ ಮಂಗಳೂರ ಮತ್ತು ಉಪಾಧ್ಯಕ್ಷರಾಗಿ ವೀಣಾ ಪ್ರಶಾಂತ ಅರಳಿಕಟ್ಟಿ ಅವಿರೋಧವಾಗಿ ಆಯ್ಕೆಗೊಂಡರು. ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಪಿ.ಬಿ. ಕಾಳಗಿ, ಎಲ್.ಎನ್. ಗುರಂ, ಎಮ್.ಎಸ್. ಪಾಟೀಲ, ಜಿ.ಎಮ್. ಬೋರಾ, ಮಹಾಂತೇಶ ಎಸ್. ಅಂಗಡಿ, ಎಲ್.ಬಿ. ಅರಸಿದ್ಧಿ, ವ್ಹಿ.ಬಿ. ಗಿರಡ್ಡಿ, ಎಮ್.ಆರ್. ಅಗ್ನಿ, ಬಿ.ಎಸ್. ತಾಳಿಕೋಟಿ, ಎಮ್.ಎಮ್. ಶೆಟ್ಟರ, ಎಸ್. ಎಸ್. ಸಪ್ಪರದ, ಸಿ.ಕೆ. ಅಕ್ಕಿ ಡಾ। ಅರುಣಾ ಕೆ. ಅಕ್ಕಿ, ಪಿ.ಎಚ್.ಹೂಲಗೇರಿ ಮತ್ತು ಎಸ್.ಎಚ್.ಸುರಪೂರ ಇವರುಗಳು ಸಭೆಯಲ್ಲಿ ಹಾಜರಿದ್ದರು.



ವೀಣಾ ಪ್ರಶಾಂತ ಅರಳಿಕಟ್ಟಿ

ಉಪಾಧ್ಯಕ್ಷರು

## ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿಗೆ ಸರ್ವತೋಮುಖ ಅಭಿವೃದ್ಧಿಗಾಗಿ ಸಾಧನಾ ಪ್ರಶಸ್ತಿ



**ಉಡುಪಿ :** ದಿನಾಂಕ : 19-08-2023ರಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ನಡೆದ ವಾರ್ಷಿಕ ಸಾಮಾನ್ಯ ಮಹಾಸಭೆಯಲ್ಲಿ ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದಲ್ಲಿ 2022-2023ನೇ ಸಾಲಿನಲ್ಲಿ ಬ್ಯಾಂಕಿಂಗ್ ವ್ಯವಹಾರದಲ್ಲಿ ಸಾಧಿಸಿರುವ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ ಹಾಗೂ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯರವರು ಗೌರವವನ್ನು ಸ್ವೀಕರಿಸಿದರು. ಈ ಸಂಧರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಮ್. ಎನ್. ರಾಜೇಂದ್ರ ಕುಮಾರ್ ಮತ್ತು ನಿರ್ದೇಶಕರು ಹಾಗೂ ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ಉಪಸ್ಥಿತರಿದ್ದರು.

## ತರಕಾರಿ ಬೆಲೆಗಳು ಸೆಪ್ಟೆಂಬರ್‌ನಿಂದ ಇಳಿಕೆಯಾಗುವ ಸಾಧ್ಯತೆಯಿದೆ : ಆರ್‌ಬಿಐ ಗವರ್ನರ್

**ಬೆಂಗಳೂರು :** ದೇಶಾದ್ಯಂತ ತರಕಾರಿ ಬೆಲೆ ಗಗನಕ್ಕೇರುತ್ತಿರುವ ಈ ಸಂದರ್ಭದಲ್ಲಿ ಆರ್‌ಬಿಐ ಕೆಲವು ಘೋಷಣೆಗಳನ್ನು ಮಾಡಿದ್ದು ಗ್ರಾಹಕರಿಗೆ ಕೊಂಚ ನೆಮ್ಮದಿ ತಂದಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಭಾರತದಲ್ಲಿ ತರಕಾರಿ ಬೆಲೆಗಳು ಇಳಿಯಲು ಪ್ರಾರಂಭಿಸಿವೆ ಮತ್ತು ಸೆಪ್ಟೆಂಬರ್‌ನಿಂದ ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ತರಕಾರಿಗಳು ಮತ್ತು ಸಿರಿಧಾನ್ಯಗಳ ಬೆಲೆ ಏರಿಕೆಯಿಂದಾಗಿ ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು 7.44% ರಷ್ಟು ಏರಿಕೆಯಾಗಿದ್ದು, 15 ತಿಂಗಳಲ್ಲೇ ಅತ್ಯಧಿಕವಾಗಿರುವ ಸಮಯದಲ್ಲಿ RBI ಹೇಳಿಕೆಯು ಬಂದಿದೆ. ಸೆಪ್ಟೆಂಬರ್‌ನಿಂದ ತರಕಾರಿ ಬೆಲೆ ಏರಿಕೆ ಕಡಿಮೆಯಾಗಲಿದೆ. ಈಗ ಪೂರೈಕೆ ಹೆಚ್ಚಾಗಿದೆ ಎಂದು ಅವರು ಹೇಳಿದರು. ಮುಂದೆ ನೋಡುವುದಾದರೆ, ಜುಲೈನಲ್ಲಿ ತರಕಾರಿ ಬೆಲೆಗಳ ಏರಿಕೆಯು ಟೊಮೆಟೊ ಬೆಲೆಗಳ ಮೂಲಕ ಕಾಣಲು ಪ್ರಾರಂಭಿಸುತ್ತಿದೆ. ಮಂಡಿಗಳಲ್ಲಿ ಟೊಮೆಟೊಗಳ ಹೊಸ ಆಗಮನವು ಈಗಾಗಲೇ ಬೆಲೆಗಳನ್ನು ಇಳಿಕೆಗೊಳಿಸುತ್ತಿದೆ ಮತ್ತು ಈರುಳ್ಳಿಯ ಸಂದರ್ಭದಲ್ಲಿ ಪೂರ್ವಭಾವಿ ಪೂರೈಕೆ ನಿರ್ವಹಣೆಯೊಂದಿಗೆ ಸೇರಿಕೊಂಡಿದೆ. ಸೆಪ್ಟೆಂಬರ್‌ನಿಂದ ತರಕಾರಿ ಹಣದುಬ್ಬರದಲ್ಲಿ ಗಮನಾರ್ಹವಾದ ನಿಧಾನಗತಿಯನ್ನು ನಾವು ನಿರೀಕ್ಷಿಸುತ್ತೇವೆ ಎಂದು ಆರ್‌ಬಿಐ ಗವರ್ನರ್ ಹೇಳಿದ್ದಾರೆ.

ಗ್ರಾಹಕರ ಬೆಲೆ ಹಣದುಬ್ಬರವು ಜುಲೈನಲ್ಲಿ 15 ತಿಂಗಳ ಗರಿಷ್ಠ ಮಟ್ಟವಾದ 7.4 ಶೇಕಡಾಕ್ಕೆ ಏರಿದೆ, ಹಿಂದಿನ ಮೂರು ತಿಂಗಳುಗಳಲ್ಲಿ 6 ಶೇಕಡಾ ಮೇಲ್ಮಟ್ಟದ ಟಾಲರೆನ್ಸ್ ಬ್ಯಾಂಡ್‌ಗಿಂತ ಕೆಳಗಿತ್ತು. ಟೊಮೇಟೊ ಮತ್ತು ಇತರ ತರಕಾರಿ ಬೆಲೆಗಳಲ್ಲಿ ತೀವ್ರ ಏರಿಕೆಯಿಂದಾಗಿ ಗಮನಾರ್ಹ ಏರಿಕೆಯಾಗಿದೆ.

ವರ್ಷದಿಂದ ವರ್ಷಕ್ಕೆ ಆಧಾರದ ಮೇಲೆ ತರಕಾರಿ ಬೆಲೆಗಳು ಶೇಕಡಾ 37ರಷ್ಟು ಏರಿಕೆಯಾಗಿರುವುದನ್ನು ಗಮನಿಸಬೇಕು, ಟೊಮೆಟೊ ಬೆಲೆಯಲ್ಲಿ 201 ರಷ್ಟು ಏರಿಕೆಗೆ ಕಾರಣವಾಗಿವೆ. ಸೆಪ್ಟೆಂಬರ್‌ನಿಂದ ತರಕಾರಿ ಹಣದುಬ್ಬರದಲ್ಲಿ ಗಮನಾರ್ಹವಾದ ನಿಧಾನಗತಿಯನ್ನು ನಾವು ನಿರೀಕ್ಷಿಸುತ್ತೇವೆ. ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ಆಹಾರದ ಬೆಲೆಗಳಿಗೆ ಅಡ್ಡಿಯಾಗಬಹುದಾದರೂ ಧಾನ್ಯಗಳ ಬೆಲೆಗಳ ದೃಷ್ಟಿಕೋನವು ಪ್ರಕಾಶಮಾನವಾಗಿ ಕಾಣುತ್ತದೆ ಎಂದು ಶಕ್ತಿಕಾಂತ ದಾಸ್ ಹೇಳಿದರು.



ಮೂಲ ಹಣದುಬ್ಬರ ಹೆಚ್ಚಳದ ಹೊರತಾಗಿಯೂ, ಕಳೆದ ಕೆಲವು ತಿಂಗಳುಗಳಲ್ಲಿ ಅದರಲ್ಲಿ ಕಂಡುಬರುವ ಸ್ಥಿರವಾದ ಸಡಿಲಿಕೆಯು ವಿತ್ತೀಯ ನೀತಿ ಪ್ರಸರಣದ ಸಂಕೇತವಾಗಿದೆ. ಹಣದುಬ್ಬರವು ನಿರಂತರವಾಗಿ ಉಳಿಯದಂತೆ ಮತ್ತು ವಿಭಾಗಗಳಾದ್ಯಂತ ಸಾಮಾನ್ಯೀಕರಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಕೇಂದ್ರೀಯ ಬ್ಯಾಂಕ್ ಕಾವಲುಗಾರನಾಗಿರುತ್ತದೆ ಎಂದು ಅವರು ಹೇಳಿದರು.

ಪುನರಾವರ್ತಿತ ಆಹಾರ ಬೆಲೆ ಆಘಾತಗಳ ಆಗಾಗ್ಗೆ ಸಂಭವಿಸುವ ಘಟನೆಗಳು ಹಣದುಬ್ಬರ ನಿರೀಕ್ಷೆಗಳ ಲಂಗರು ಹಾಕುವಿಕೆಗೆ ಅಪಾಯವನ್ನುಂಟುಮಾಡುತ್ತವೆ, ಇದು ಸೆಪ್ಟೆಂಬರ್ 2022 ರಿಂದ ನಡೆಯುತ್ತಿದೆ. ನಾವು ಇದರ ಬಗ್ಗೆ ಜಾಗರೂಕರಾಗಿರುತ್ತೇವೆ ಎಂದು ಶಕ್ತಿಕಾಂತ ದಾಸ್ ಹೇಳಿದರು.

ಏರುತ್ತಿರುವ ಬೆಲೆಗಳನ್ನು ನಿಯಂತ್ರಿಸಲು ಮೇ 2022 ರಿಂದ ದೇಶವು ಒಟ್ಟು 250 ಬೇಸಿಸ್ ಪಾಯಿಂಟ್‌ಗಳಿಂದ ದರಗಳನ್ನು ಹೆಚ್ಚಿಸಿದೆ. ಆರ್‌ಬಿಐ ಆದರೆ ಹಣದುಬ್ಬರವನ್ನು ವಿತ್ತೀಯ ನೀತಿ ಸಮಿತಿಯ ಕಡ್ಡಾಯ ಮಧ್ಯಮ-ಅವಧಿಯ ಗುರಿಯಾದ 4% ಗೆ ಹೊಂದಿಸಲು ದೃಢವಾಗಿ ಗಮನಹರಿಸಿದೆ. ಬೆಲೆ ಸ್ಥಿರತೆಯು ಸುಸ್ಥಿರ ಬೆಳವಣಿಗೆಗೆ ಆಧಾರವಾಗಿರಬೇಕು ಎಂದು ಅವರು ಹೇಳಿದರು, ಬೆಳವಣಿಗೆಯನ್ನು ಮುಂದುವರೆಸಲು ಮತ್ತು ಕ್ಯಾಪೆಕ್ಸ್ ಚಕ್ರವು 2023-24 ರಲ್ಲಿ ವೇಗವನ್ನು ಪಡೆಯಲು ಪರಿಸ್ಥಿತಿಗಳು ಅನುಕೂಲಕರವಾಗಿವೆ ಎಂದು ಹೇಳಿದರು.

# ಶ್ರೀ ಕಾಡಸಿದ್ದೇಶ್ವರ ಪಟ್ಟಣ ಸಹಕಾರ ಬ್ಯಾಂಕ್ ನಿ., ಬನಹಟ್ಟಿ : ವಾರ್ಷಿಕ ಮಹಾಸಭೆ



**ಬನಹಟ್ಟಿ :** ದಿನಾಂಕ 06/08/2023 ರಂದು ನಗರದ ಪ್ರತಿಷ್ಠಿತ ಶ್ರೀ ಕಾಡಸಿದ್ಧೇಶ್ವರ ಪಟ್ಟಣ ಸಹಕಾರಿ ಬ್ಯಾಂಕ ನಿ., ಬನಹಟ್ಟಿಯ ಸನ್ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಬನಹಟ್ಟಿಯ ಶ್ರೀ ಡಿ. ಜಿ. ಭದ್ರನವರ ಕಲ್ಯಾಣ ಮಂಟಪದಲ್ಲಿ ಕರೆಯಲಾಗಿತ್ತು. ಬ್ಯಾಂಕಿನ ನೂತನ ಆದ್ಯಕ್ಷರಾದ ಶ್ರೀ ಸಿದ್ರಾಮಪ್ಪ ಎಸ್. ಸವದತ್ತಿಯವರ ಅಧ್ಯಕ್ಷತೆಯಲ್ಲಿ ಹಾಗೂ ವೇದಿಕೆಯ ಮೇಲೆ ಉಪಸ್ಥಿತರಿದ್ದ ಬ್ಯಾಂಕಿನ ಎಲ್ಲ ನಿರ್ದೇಶಕರು, ವಿವಿಧ ಸಂಘಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಗಣ್ಯಮಾನ್ಯರು ಸಸಿಗೆ ನೀರುಣಿಸುವದರ ಮೂಲಕ ಮಹಾಸಭೆಯನ್ನು ಉದ್ಘಾಟಿಸಿದರು.

ಮಹಾಸಭೆಯ ವೇದಿಕೆಯ ಮೇಲೆ ಹಿರಿಯ ನಿರ್ದೇಶಕರಾದ ಶ್ರೀ ಶಂಕರಲಿಂಗಪ್ಪ ಮ. ಜುಂಜಪ್ಪನವರ, ಶ್ರೀ ಸಿದ್ರಾಮಪ್ಪ ಸವದತ್ತಿ, ಶ್ರೀ ಓಂಪ್ರಕಾಶ ಕಾಬರಾ, ಶ್ರೀ ಸುರೇಶ ಅಬಕಾರ, ಶ್ರೀ ಮಲ್ಲಿನಾಥ ಕಕಮರಿ, ಶ್ರೀ ರಾಮಪ್ಪ ಭದ್ರನವರ, ಶ್ರೀ ಶ್ರೀಶೈಲ ಯಾದವಾಡ, ಶ್ರೀ ವಿಜಯಕುಮಾರ ಹುಡೇದಮನಿ, ಶ್ರೀ ರಾಜಶೇಖರ ಶಿವಪೂಜಿ ,ಶ್ರೀ ಶಶಿಕಾಂತ ಹುನ್ನೂರ, ಶ್ರೀ ದುಂಡಪ್ಪ ಎಸ್. ಮಾಚಕನೂರ ಶ್ರೀಮತಿ ಸವಿತಾ ಬ. ಬಾಣಕಾರ, ಶ್ರೀಮತಿ ರೇಖಾ ಆರ್. ಹಿರೇಮಠ, ಶ್ರೀ ಜಗದೀಶ ಎಸ್. ಕೋರಿಪೇಠ ವೃತ್ತಿಪರ ನಿರ್ದೇಶಕರಾದ ಶ್ರೀ ಮಹೇಂದ್ರ ಬಿ. ಹೊರಗಿನಮನಿ, ಶ್ರೀ ಶಿವಲಿಂಗಪ್ಪ ಎಂ. ಫಕೀರಪೂರ, ಜನತಾ ಶಿಕ್ಷಣ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜ ದೇ. ಭದ್ರನವರ, ಚೇರಮನ್‌ರಾದ ಶ್ರೀ ಬಸವರಾಜ ಎಂ. ಜಾಡಗೌಡ, ಬನಹಟ್ಟಿ ಸಹಕಾರಿ ನೂಲಿನ ಗಿರಣಿಯ ಶ್ರೀ ಶಂಕರ ಸೋರಗಾಂವಿ, ಬನಹಟ್ಟಿ ಹಟಗಾರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ವ್ಹಿ. ವ್ಹಿ. ಕೊಕಟನೂರ ಮುಂತಾದ ಗಣ್ಯ ಮಾನ್ಯರು ಉಪಸ್ಥಿತರಿದ್ದರು.

ಮಹಾಸಭೆಯಲ್ಲಿ ಬ್ಯಾಂಕಿನ ಸದಸ್ಯರು, ಪತ್ರಕರ್ತ ಮಿತ್ರರು, ಬ್ಯಾಂಕಿನ ಸಿಬ್ಬಂದಿಯವರಾದ ಶ್ರೀ ಸದಾಶಿವ ಶಿರೋಳ, ಶ್ರೀ ಸಂಜಯ ಬಿದರಿ, ಕುಮಾರಿ ಗೀತಾ ಬಡೆಮಿ, ಶ್ರೀ ಗಂಗಪ್ಪ ಚಿಂಚಖಂಡಿ, ಶ್ರೀ ವಿಜಯಕುಮಾರ ಸಾವಳಗಿ, ಶ್ರೀ ಗುರುರಾಜ ಮಮದಾಪೂರ, ಶ್ರೀ ಪ್ರಕಾಶ ಸೋರಗಾಂವಿ, ಶ್ರೀ ಸತೀಶ ವಗ್ಗ ಹಾಗೂ ಪಿಗ್ಮಿ ಸಂಗ್ರಹಕಾರರಾದ  ಶ್ರೀ ಶ್ರೀಶೈಲ ಬಂಗಿ, ಶ್ರೀ ಈಶ್ವರ ಹಾರುಗೇರಿ, ಶ್ರೀ ಬಸವರಾಜ ಆದಗೊಂಡ ಹಾಗೂ ಶ್ರೀ ರಾಜು ಬಾಣಕಾರ ಹಾಜರಿದ್ದರು. ಮಹಾಸಭೆಯ ಕಾರ್ಯಕ್ರಮವನ್ನು ವ್ಯವಸ್ಥಾಪಕರಾದ ಶ್ರೀ ಮಹಾಲಿಂಗಪ್ಪ ಬಾಗಲಕೋಟರವರು ನಡೆಸಿಕೊಟ್ಟರು. ಬ್ಯಾಂಕಿನ ಸಹಾಯಕ ವ್ಯವಸ್ಥಾಪಕರಾದ ಶ್ರೀ ಸುರೇಶ ಕೋಪರ್ಡೆರವರ ವಂದನಾರ್ಪನೆಯೊಂದಿಗೆ ಮಹಾಸಭೆ ಮುಕ್ತಾಯವಾಯಿತು.

## ಎಂಸಿಸಿ ಬ್ಯಾಂಕಿಗೆ ಅನಿಲ್ ಲೋಬೊ ತಂಡ ಅವಿರೋಧ ಪುನರಾಯ್ಕೆ, 2028ವರೆಗೆ ಮತ್ತೆ ಸಾರಥ್ಯ



ಮಂಗಳೂರು ಕಥೋಲಿಕ್ – ಅಪರೇಟಿವ್ ಬ್ಯಾಂಕ್ ನಿಯಮಿತ  ಇದರ, 13 ಆಗಸ್ಟ್ ರಂದು ನಾಮಪತ್ರ ಸಲ್ಲಿಕೆಯೊಂದಿಗೆ ಆರಂಭಗೊಂಡ ಚುನಾವಣಾ ಪ್ರಕ್ರಿಯೆಗೆ, ಆಕಾಂಕ್ಷೆವುಳ್ಳ 14 ಅಭ್ಯರ್ಥಿಗಳು ಅರ್ಜಿಸಲ್ಲಿಸಿದ್ದು, ಆಗಸ್ಟ್ 20 ರಂದು ನಾಮಪತ್ರ ಪರಿಶೀಲನೆಯಲ್ಲಿ ನಾಮಪತ್ರ ಸಲ್ಲಿಸಿದ ಎಲ್ಲಾ 14 ಅರ್ಭ್ಯರ್ಥಿಗಳು ಸಲ್ಲಿಸಿದ ನಾಮಪತ್ರಗಳು ಕ್ರಮಬದ್ದವಾಗಿದ್ದು, ಬ್ಯಾಂಕಿನ ಆಡಳಿತ ಮಂಡಲಿ ರಚನೆಯಾಗಲು ಇರಬೇಕಾದ ಕೋರಂ ಇದ್ದುದ್ದನ್ನು ಪರಿಗಣಿಸಿ, ರಿಟರ್ನಿಂಗ್ ಅಧಿಕಾರಿ ಶ್ರೀಸುಧೀರ್ ಕುಮಾರ್ ಜೆ., ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಗಳೂರು ಉಪವಿಭಾಗ, ಮಂಗಳೂರು, ಇವರು ಅರ್ಜಿಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳನ್ನು ಅವಿರೋಧ ಅಯ್ಕೆಗೊಂಡು ಚುನಾಯಿತರೆಂದು ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ (ಎಂ.ಸಿ.ಸಿ.ಬ್ಯಾಂಕ್) ಇದರ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುವುದರಿಂದ, ಆಗಸ್ಟ್ 27 ರಂದು ನಡೆಯಬೇಕಿದ್ದ ಚುನಾವಣೆ ಪ್ರಕ್ರಿಯೆ ನಡೆಯುವುದಿಲ್ಲ ಎಂದು ಬ್ಯಾಂಕಿನ ಮಹಾಪ್ರಬಂಧಕ ಸುನಿಲ್ ಮಿನೇಜಸ್ ತಿಳಿಸಿದ್ದಾರೆ.

ಈ ಮೂಲಕ 111 ವರ್ಷಗಳ ಇತಿಹಾಸವಿರುವ, ಮಂಗಳೂರಿನ ಸಹಕಾರಿ ರಂಗದ ಮುಂಚೂಣಿಯ ಎಂಸಿಸಿ ಬ್ಯಾಂಕಿನ ಚುಕ್ಕಾಣಿ, ಮುಂದಿನ 5 ವರ್ಷಗಳ ಅವಧಿಗೆ, ಹಾಲಿ ಅಧ್ಯಕ್ಷ ಶ್ರೀ ಅನಿಲ್ ಲೋಬೊ ನೇತೃತ್ವದ ತಂಡದ ಪಾಲಾಗಿದೆ. 111 ವರ್ಷಗಳ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಬ್ಯಾಂಕಿನ ನಿರ್ದೇಶಕ ಮಂಡಳಿಯ ಆಯ್ಕೆ ಅವಿರೋಧವಾಗಿ ನಡೆದಿದ್ದು, ವೆಲೆನ್ಸಿಯಾ ನಿವಾಸಿ ಶ್ರೀ ಅನಿಲ್ ಲೋಬೊ, ಪೆರ್ಮಾಯಿ ನೇತೃತ್ವದ ತಂಡದಲ್ಲಿ ಜೆರಾಲ್ಡ್ ಪಿಂಟೋ, ಕಲ್ಯಾಣ್‌ಪುರ, ರೋಶನ್ ಡಿ'ಸೋಜ, ಮುಡಿಪು, ಹೆರಾಲ್ಡ್ ಜೋನ್ ಮೊಂತೆರೊ, ಕೆಲರಾಯ್, ಜೋಸೆಫ್ ಎಂ.ಅನಿಲ್ ಪತ್ರಾವೊ, ದೆರೆಬೈಲ್, ಡೇವಿಡ್ ಡಿ'ಸೋಜ, ಬಜಪೆ, ಮೆಲ್ವಿನ್ ಅಕ್ವಿನಸ್‌ವಾಸ್, ಮಂಗಳೂರು, ಜೆ.ಪಿ.ರೋಡ್ರಿಗಸ್, ಪುತ್ತೂರು, ಆಂಡ್ರು ಡಿ'ಸೋಜ, ಮೂಡಬಿದ್ರಿ, ಎಲ್‌ರೊ ಕಿರಣ್ ಕ್ರಾಸ್ಟೊ, ಗಂಗೊಳ್ಳಿ, ಜೆರಾಲ್ಡ್ ಜೂಡ್ ಡಿ'ಸಿಲ್ವ, ಕಾರ್ಕಳ, ವಿನ್ಸೆಂಟ್ ಅನಿಲ್‌ಲಸ್ರಾದೊ, ಬಂಟ್ವಾಳ, ಐರಿನ್ ರೆಬೆಲ್ಲೊ, ಕುಲಶೇಖರ ಮತ್ತು ಫ್ರೀಡಾಫ್ಲಾವಿಯಾ ಡಿ'ಸೋಜ, ಬಳ್ಕುಂಜೆ ಇದ್ದಾರೆ.

# ಬಡ್ಡಿ ದರ ಯಥಾಸ್ಥಿತಿ ಮಾರುಕಟ್ಟೆಯಲ್ಲಿ ಹಣ ಹರಿವು; ತಡೆಗೆ ಸಿಆರ್‌ಆರ್ ಕಡಿತ




ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಸತತ ಮೂರನೇ ಬಾರಿಗೆ ಬ್ಯಾಂಕ್ ಬಡ್ಡಿ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಆದರೂ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ನಡುವೆ ಹೆಚ್ಚುತ್ತಿರುವ ಹಣದುಬ್ಬರ ಪಥದತ್ತ ಗಮನ ನೀಡುವ ಅಗತ್ಯವನ್ನು ಪ್ರತಿಪಾದಿಸಿದೆ.

ಪ್ರಸ್ತುತ ಇರುವ ಶೇ.6.5ರಷ್ಟು ರೆಪೋ ದರವನ್ನೇ ಮುಂದುವರಿಸುವುದಕ್ಕೆ ಎಲ್ಲಾ ಎಂಪಿಸಿ ಸದಸ್ಯರು ಸಹಮತ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಒಟ್ಟು ಆರು ಎಂಪಿಸಿ ಸದಸ್ಯರ ಪೈಕಿ ಐವರು ಸದಸ್ಯರು ಮಾರುಕಟ್ಟೆಯಲ್ಲಿ ಹಣದುಬ್ಬರವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಹಣ ಪೂರೈಕೆ ಕಡಿತಗೊಳಿಸುವ ನಿಲುವನ್ನು ಮುಂದುವರಿಸುವುದಕ್ಕೆ ಮತ ಹಾಕಿದ್ದಾರೆ.

ಆದರೆ, ಅನಿರೀಕ್ಷಿತ ಕ್ರಮವನ್ನು ಕೈಗೊಂಡಿರುವ ಆರ್‌ಬಿಐ, ಬ್ಯಾಂಕುಗಳಿಗೆ ಶೇಕಡಾ 10ರಷ್ಟು ನಗದು ಮೀಸಲು ಅನುಪಾತ (ಸಿಆರ್‌ಆರ್) ಹೆಚ್ಚಳ ಘೋಷಿಸಿದೆ. ಇದು ಪ್ರಾಥಮಿಕವಾಗಿ ರೂ. 2,000 ನೋಟುಗಳ ಹಿಂಪಡೆಯುವಿಕೆಯಿಂದಾಗಿ ಮಾರುಕಟ್ಟೆಯಲ್ಲಿ ಹೆಚ್ಚಿನ ಹಣದ ಹರಿವನ್ನು ತಡೆಯುವ ನಿಟ್ಟಿನಲ್ಲಿ ಕೈಗೊಂಡ ಪರಿಹಾರ ಕ್ರಮ ಎನ್ನಬಹುದಾಗಿದೆ. ಹೆಚ್ಚಿನ ಮೌಲ್ಯದ ನೋಟುಗಳ ಅಮಾನ್ಯೀಕರಣದ ನಂತರ 2016ರ ನವೆಂಬರ್ 26 ಮತ್ತು 2016ರ ಡಿಸೆಂಬರ್ 10ರ ನಡುವೆ ಪರಿಚಯಿಸಲಾಗಿದ್ದ ಶೇಕಡಾ 100ರಷ್ಟು ಸಿಆರ್‌ಆರ್ ಹೆಚ್ಚಳದ ಕ್ರಮವನ್ನು ಇದು ಹೋಲುತ್ತದೆ. ಪ್ರಸ್ತುತ ಸಿಆರ್‌ಆರ್ ಹೆಚ್ಚಳದಿಂದಾಗಿ ಅಂದಾಜು–1 ಟ್ರಿಲಿಯನ್ (ಒಂದು ಲಕ್ಷ ಕೋಟಿ ರೂಪಾಯಿ) ನಗದವನ್ನು ಮಾರುಕಟ್ಟೆಯಿಂದ ಹೊರಹಾಕಬಹುದಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ವ್ಯವಸ್ಥೆಯಲ್ಲಿನ ಒಟ್ಟು ನಗದು ದ್ರವ್ಯತೆಯು ಆಗಸ್ಟ್ 8ರ ಹೊತ್ತಿಗೆ–3.5 ಟ್ರಿಲಿಯನ್‌ಗೆ (ಮೂರೂವರೆ ಲಕ್ಷ ಕೋಟಿ ರೂ.) ಸಮೀಪದಲ್ಲಿದೆ.

ನಗದು ದ್ರವ್ಯತೆ ಮಿತಿಮೀರಿದ ಹಿನ್ನೆಲೆಯಲ್ಲಿ ಸಿಆರ್‌ಆರ್ ಹೆಚ್ಚಳ ಕ್ರಮವು ಅಗತ್ಯವೆಂದು ಪರಿಗಣಿಸಲಾಗಿದೆ. ಬೆಲೆ ಮತ್ತು ಆರ್ಥಿಕ ಸ್ಥಿರತೆಯ ಹಿತಾಸಕ್ತಿಯಿಂದ ನಾವು ಇದನ್ನು ಅಪೇಕ್ಷಣೀಯವೆಂದು ಪರಿಗಣಿಸಿದ್ದೇವೆ. ಇದು ಹಣದುಬ್ಬರ ಪರಿಸ್ಥಿತಿಯ ಮೇಲೂ ಪರಿಣಾಮ ಬೀರುತ್ತದೆ. ಇದು ತಾತ್ಕಾಲಿಕ ಕ್ರಮವಾಗಿದ್ದು, ಸೆಪ್ಟೆಂಬರ್ 8 ಅಥವಾ ಅದಕ್ಕೂ ಮೊದಲು ಇದನ್ನು ಮರುಪರಿಶೀಲಿಸಲಾಗುವುದು ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ.

2023–24ನೇ ಹಣಕಾಸು ವರ್ಷದಲ್ಲಿ ಹಣದುಬ್ಬರ ಮುನ್ಸೂಚನೆಯನ್ನು ಶೇಕಡಾ 5.1 ರಿಂದ ಶೇಕಡಾ 5.4ಕ್ಕೆ ಎಂಪಿಸಿ ಪರಿಷ್ಕರಿಸಿದೆ. ಸೆಪ್ಟೆಂಬರ್ ತ್ರೈಮಾಸಿಕ ಮುನ್ಸೂಚನೆಯನ್ನು 100 ಮೂಲ ಅಂಕ ಹೆಚ್ಚಿಸಿ 6.2 ಎಂದು ಅಂದಾಜಿಸಿದೆ. ಅಲ್ಲದೆ, ಮುಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕಕ್ಕೆ ಹಣದುಬ್ಬರ ಮುನ್ಸೂಚನೆಯನ್ನು ಶೇಕಡಾ 5.2ಕ್ಕೆ ನಿಗದಿಪಡಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಹಣದುಬ್ಬರದಲ್ಲಿ ಇತ್ತೀಚಿನ ಹೆಚ್ಚಳವು ಅಲ್ಪಾವಧಿಯದ್ದಾಗಿರಲಿದೆ ಎಂಬ ನಿರೀಕ್ಷೆಯಿದೆ. ಇಂತಹ ಸಂದರ್ಭಗಳಲ್ಲಿ ನಾವು ಜಾಗರೂಕರಾಗಿರಬೇಕು. ಆಹಾರ ಹಣದುಬ್ಬರದಲ್ಲಿನ ಈ ಹೆಚ್ಚಳವು ಸಾಮಾನ್ಯೀಕರಿಸುವ ಲಕ್ಷಣಗಳನ್ನು ತೋರಿಸಿದರೆ, ನಾವು ಕಾರ್ಯನಿರ್ವಹಿಸಬೇಕಾಗುತ್ತದೆ. ನೀತಿ ಸಾಧನಗಳನ್ನು ನಿಯೋಜಿಸಲು ನಾವು ಅರ್ಜುನನ ಕಣ್ಣುಗಳನ್ನು ಮೀರಿ ಹೋಗಬೇಕಾಗಿದೆ. ಹಣದುಬ್ಬರವನ್ನು ಶೇಕಡಾ 4ರ ಗುರಿಗೆ ಹೊಂದಿಸಲು ಎಂಪಿಸಿ ದೃಢವಾಗಿ ಗಮನಹರಿಸಬೇಕು ಎಂದು ದಾಸ್ ಹೇಳಿದ್ದಾರೆ.

ಆರ್‌ಬಿಐನ ಅಭಿಪ್ರಾಯವು ವಿಚಿತ್ರವಾಗಿದೆ ಎಂದಿರುವ ಅರ್ಥಶಾಸ್ತ್ರಜ್ಞರು, ಮುಂದಿನ ಆರ್ಥಿಕ ವರ್ಷದವರೆಗೆ ಬಡ್ಡಿ ದರ ಕ್ರಮದಲ್ಲಿ ಯಾವುದೇ ಬದಲಾವಣೆ ಆಗಲಿಕ್ಕಿಲ್ಲ ಎಂದು ಹೇಳಿದ್ದಾರೆ.

2023–24ನೇ ಹಣಕಾಸು ವರ್ಷದವರೆಗೆ ಬಡ್ಡಿ ದರಗಳ ಮೇಲೆ ಆರ್‌ಬಿಐ ಯಥಾಸ್ಥಿತಿಯನ್ನು ಮುಂದುವರಿಸುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ. ಅಲ್ಲದೆ, 2024–25ನೇ ಹಣಕಾಸು ವರ್ಷದವರೆಗೆ ಬಡ್ಡಿ ದರ ಕಡಿತದ ಸಾಧ್ಯತೆಯಿಲ್ಲ. ದರ ಕಡಿತದ ಸಮಯವು ದೇಶೀಯ ಮೂಲಭೂತ ಅಂಶಗಳು ಹಾಗೂ ಜಾಗತಿಕ ಬಡ್ಡಿದರ ಚಕ್ರದ ತಿರುವು–ಇವೆರಡರ ಮೇಲೆ ಅವಲಂಬಿತವಾಗಿದೆ. ಆದ್ದರಿಂದ, ಅಮೆರಿಕದ ಫೆಡರಲ್ ರಿಸರ್ವ್‌ಗಿಂತ ಮುಂಚಿತವಾಗಿ ಬಡ್ಡಿ ದರ ಕಡಿತದ ಚಕ್ರವನ್ನು ಆರ್‌ಬಿಐ ಪ್ರಾರಂಭಿಸುವುದು ಸಾಧ್ಯವಿಲ್ಲ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ತನ್ನ ವರದಿಯಲ್ಲಿ ತಿಳಿಸಿದೆ.

ಮುಂಗಾರಿನ ಪ್ರಾದೇಶಿಕ ವಿತರಣೆಯ ಅನಿಶ್ಚಿತತೆಗಳು ಹಾಗೂ ಎಲ್ ನಿನೋ ಪರಿಣಾಮದಿಂದಾಗಿ ಇತರ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಆಹಾರ ಹಣದುಬ್ಬರ ಹೆಚ್ಚಾಗುವ ಅಪಾಯಗಳಿವೆ ಎಂದು ಗೋಲ್ಡ್‌ಮನ್ ಸ್ಯಾಚ್ಸ್ ಸಂಸ್ಥೆ ಅಂದಾಜಿಸಿದೆ.

**ಹಣದುಬ್ಬರ ಸಾಧ್ಯತೆ :** ತರಕಾರಿ ಬೆಲೆ ಹೆಚ್ಚಳ ತಾತ್ಕಾಲಿಕವಾಗಿರುತ್ತದೆ ಮತ್ತು ಇತ್ತೀಚಿನ ಏರಿಕೆಯು ಮುಂಬರುವ ತಿಂಗಳುಗಳಲ್ಲಿ ತೀವ್ರವಾಗಿ ಹಿಮ್ಮುಖವಾಗಬಹುದು ಎಂದು ಕೇಂದ್ರ ಬ್ಯಾಂಕ್ ಹೇಳಿದ್ದರೂ ಧಾನ್ಯಗಳು, ಬೇಳೆಕಾಳುಗಳು ಮತ್ತು ಜಾಗತಿಕ ಸರಕುಗಳ ಬೆಲೆ ಹೆಚ್ಚಳದಿಂದ ಇತರ ಹಣದುಬ್ಬರ ಸಾಧ್ಯತೆಗಳ ಅಪಾಯಗಳನ್ನು ಎತ್ತಿ ತೋರಿಸಿದೆ. ಹಣದುಬ್ಬರ ಮುನ್ಸೂಚನೆಯನ್ನು ಆಗಾಗ್ಗೆ ಬದಲಾಯಿಸದಿರುವ ಆಯ್ಕೆಯ ಬಗ್ಗೆ ಕೂಡ ದಾಸ್ ಮಾತನಾಡಿದ್ದಾರೆ.

# ಶಿಕಾರಿಪುರ ಶಿವ ಸಹಕಾರಿ ಬ್ಯಾಂಕಿನ 27ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ

**ಶಿಕಾರಿಪುರ :** ದಿನಾಂಕ : 21–08–2023ರ ಸೋಮವಾರದಂದು ಶ್ರೀ ತರಳಬಾಳು ಜಗದ್ಗುರು ಸಮುದಾಯ ಭವನ, ಶಿಕಾರಿಪುರ ಇದರ ಸಭಾಂಗಣದಲ್ಲಿ ಶಿವ ಸಹಕಾರಿ ಬ್ಯಾಂಕ್ ನಿಯಮಿತ ಶಿಕಾರಿಪುರ ಇದರ 27ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಜಿ. ಈಶ್ವರಪ್ಪಗೌಡರು ನಳ್ಳಿನಕೊಪ್ಪ ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು.

ಬ್ಯಾಂಕಿನ ಅಧ್ಯಕ್ಷರು ಮಹಾಸಭೆಯಲ್ಲಿ ಮಾತನಾಡುವ ಪ್ರಾರಂಭದಲ್ಲಿ ಶಿವ ಸಹಕಾರಿ ಬ್ಯಾಂಕಿನ ಹುಟ್ಟಿಗೆ ಶ್ರೀಮದುಜ್ಜಯಿನಿ ಸದ್ದರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1108 ಶ್ರೀ ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಬೃಹನ್ಮಠ, ಸಿರಿಗೆರೆ ಇವರ ಅನುಗ್ರಹ ಮತ್ತು ಆಶಿರ್ವಾದವೇ ಒಂದು ದೊಡ್ಡ ಪ್ರೇರಕ ಶಕ್ತಿಯಾಗಿದೆ ಎಂದು ತರಳಬಾಳು ಶ್ರೀಗಳನ್ನು ಸ್ಮರಿಸಿದರು.

ಜ್ಯೋತಿ ಬೆಳಗುವುದರೊಂದಿಗೆ ಮಹಾಸಭೆಯ ಕಾರ್ಯಕ್ರಮಗಳು ವಿಧ್ಯುಕ್ತವಾಗಿ ಪ್ರಾರಂಭಗೊಂಡವು, ಮಹಾಸಭೆಯ ಕಲಾಪಗಳು ಮುಗಿದ ಬಳಿಕ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಜಿ. ಈಶ್ವರಪ್ಪಗೌಡರು ನಳ್ಳಿನಕೊಪ್ಪ ಇವರು ಅಧ್ಯಕ್ಷೀಯ ಬಾಷಣ ಮಾಡುತ್ತಾ ಕಳೆದ ಹತ್ತು ವರ್ಷಗಳಲ್ಲಿ ಬ್ಯಾಂಕಿನ ಒಟ್ಟು ವ್ಯವಹಾರವು 3 ಪಟ್ಟಿಗೂ ಮೀರಿ ವಹಿವಾಟು ವೃದ್ದಿಸಿಕೊಂಡಿದೆ. ದಿನಾಂಕ : 31.3.2023ರ ಅಂತ್ಯಕ್ಕೆ ದುಡಿಯುವ ಬಂಡವಾಳವು ರೂ.41.56 ಕೋಟಿ ಗಳಾಗಿರುತ್ತದೆ. ಅಂತೆಯೇ ಪ್ರಸಕ್ತ ಸಾಲಿನಲ್ಲಿ ನಮ್ಮ ಬ್ಯಾಂಕ್ ರೂ. 18.50 ಲಕ್ಷ ಆದಾಯ ತೆರಿಗೆಗಾಗಿ ಅನುವು ಕಾಯ್ದಿರಿಸಿದೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮದಂತೆ ರೂ.12.50 ಲಕ್ಷ ಎನ್.ಪಿ.ಎ ಬಾಬ್ತಿಗೆ ಮೀಸಲು ಕಾಯ್ದಿರಿಸಿದ ನಂತರ ರೂ. 50.57 ಲಕ್ಷ ನಿವ್ವಳ ಲಾಭ ಗಳಿಸಿರುವುದು ಈವರೆಗಿನ ದಾಖಲೆಯಾಗಿದೆ. ಹಾಗೂ 31.3.2023ರ ಅಂತ್ಯಕ್ಕೆ ರೂ. 36.21 ಕೋಟಿ ಠೇವಣಿ ಸಂಗ್ರಹಣೆ ಮಾಡಿ ರೂ. 26.21 ಕೋಟಿ ಸಾಲ ಮುಂಗಡ ನೀಡಿರುತ್ತೇವೆ. ದಿನಾಂಕ : 31.03.2023 ಕ್ಕೆ ಇದ್ದಂತೆ ನಮ್ಮ ಬ್ಯಾಂಕಿನ ಒಟ್ಟು ವ್ಯವಹಾರ ರೂ.68.42 ಕೋಟಿಗೆ ತಲುಪಿರುತ್ತದೆ ಮತ್ತು ವರದಿ ಸಾಲಿನಲ್ಲಿ ರೂ. 259.20 ಕೋಟಿ ಗಳಿಗೂ ಆಧಿಕ ಹಣದ ವಹಿವಾಟು ನೆಡೆದಿರುತ್ತದೆ **(Total turnover of the Bank)** ಮತ್ತು ಒಟ್ಟು ಬ್ಯಾಂಕಿನ ನಿವ್ವಳ ಆಸ್ತಿ (Net worth) ಸ್ವಂತ ನಿಧಿಗಳನ್ನೊಳಗೊಂಡಂತೆ ರೂ. 4.01 ಕೋಟಿಗಳಿದ್ದು ಇದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು.



ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಬಿ. ಪರಮೇಶ್ವರಪ್ಪ ಮಳೂರು, ಶ್ರೀ ಸಿ. ಮಹದೇವಪ್ಪ ಮಾರವಳ್ಳಿ, ಶ್ರೀ ಹೆಚ್. ರಾಜಶೇಖರಪ್ಪ ಗಾಮ, ಶ್ರೀ ಕೆ. ಗಂಗಾಧರಪ್ಪ ಈಸೂರು, ಶ್ರೀ ಬಿ.ಶಿವಪ್ಪ ಈಸೂರು, ಶ್ರೀ ಕೆ.ಜಿ. ಚಂದ್ರಕುಮಾರ ಶಿಕಾರಿಪುರ, ಶ್ರೀಮತಿ ಸುಮ ಎಂ. ಚಿಕ್ಕಜೋಗಿಹಳ್ಳಿ, ಶ್ರೀ ಎನ್. ಭಾಗ್ಯಮ್ಮ ನೆಲವಾಗಿಲು, ಶ್ರೀ ಜಿ.ಕೆ. ನಾಗರಾಜ್ ಶಿಕಾರಿಪುರ, ಶ್ರೀ ಕೆ.ಎಂ. ಪ್ರಕಾಶ್ ಶಿಕಾರಿಪುರ, ಶ್ರೀ ಜಿ. ಪರಮೇಶ್ವರಪ್ಪ ಶಿಕಾರಿಪುರ, ವೃತ್ತಿಪರ ನಿರ್ದೇಶಕರುಗಳಾದ ಶ್ರೀ ಸತೀಶ್ ಹೆಚ್.ಕೆ. ಹುಲಗಿನಕೊಪ್ಪ, ಶ್ರೀ ವಿ.ಎಸ್. ಕುರ್ತುಕೋಟಿ ಶಿಕಾರಿಪುರ ಮತ್ತು ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಕೆ.ಆರ್. ಬಸವರಾಜಪ್ಪ ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದು, ಅಪಾರ ಪ್ರಮಾಣದಲ್ಲಿ ಸದಸ್ಯರುಗಳು ಭಾಗವಹಿಸಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಒಂದು ಸಾಲಕ್ಕೆ ಸಾಲಗಾರನ ತಂದೆ ಜಾಮೀನು ಹಾಕಿದ್ದಾರೆ. ಸಾಲಗಾರ ತನ್ನ ದುರ್ವ್ಯವಹಾರದಿಂದ ವ್ಯಾಪಾರದಲ್ಲಿ ನಷ್ಟ ಅನುಭವಿಸಿ ನಾಪತ್ತೆಯಾಗಿದ್ದಾನೆ. ಸಾಲ ಸುಸ್ತಿಯಾಗಿದ್ದು, ಭದ್ರತೆಯಾಗಿ ನೀಡಿದ ಆಸ್ತಿಯ ಸ್ಥಳ ವ್ಯಾಪಾರಕ್ಕೆ ಅಥವಾ ವಾಸಕ್ಕೆ ಪ್ರಸಕ್ತವಾಗಿಲ್ಲದಿದ್ದುರಿಂದ ಬ್ಯಾಂಕಿನ ಮೀಸಲು ಬೆಲೆಗೆ ಖರೀದಿದಾರರು ಬರುತ್ತಿಲ್ಲ. ಹೀಗಿರುವಾಗ, ಸಾಲಗಾರನ ಸಹೋದರಿ ಬ್ಯಾಂಕು ಒ.ಟಿ.ಎಸ್. ನೀಡುವುದಾದಲ್ಲಿ ತಾನು ಒ.ಟಿ.ಎಸ್. ಹಣ ತುಂಬಲು ಸಿದ್ದಳಿದ್ದು, ಸಹೋದರ ಬ್ಯಾಂಕಿಗೆ ಭದ್ರತೆಯಾಗಿ ನೀಡಿದ ಆಸ್ತಿಯನ್ನು ತನ್ನ ಹೆಸರಿಗೆ ನೋಂದಣಿ ಮಾಡಬೇಕೆಂದು ಬೇಡಿಕೆ ಇಟ್ಟಿದ್ದಾಳೆ. ಬ್ಯಾಂಕು ಆಕೆಯ ಬೇಡಿಕೆಗೆ ಒಪ್ಪಿ, ಸುಸ್ತಿ ಸಾಲವನ್ನು ಒ.ಟಿ.ಎಸ್. ಮುಖಾಂತರ ವಸೂಲು ಮಾಡಬಹುದೇ? ಈ ಬಗ್ಗೆ ನಮಗೆ ಮಾರ್ಗದರ್ಶನ ನೀಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಕೇವಲ ಸಾಲಗಾರ ಮಾತ್ರ ತನ್ನ ಸ್ವಂತಹಣದಿಂದ ಅಥವಾ ಇತರ ಮೂಲಗಳಿಂದ ಪಡೆದ ಹಣದಿಂದ ಸುಸ್ತಿ ಸಾಲವನ್ನು ರಾಜಿ ಇತ್ಯರ್ಥ (ಒ.ಟಿ.ಎಸ್) ಮೂಲಕ ಹಿಂತಿರುಗಿಸಲು ಬ್ಯಾಂಕಿಗೆ ಅರ್ಜಿ ಹಾಕಬಹುದು. ಇದರಲ್ಲಿ, ಮೂರನೇ ವ್ಯಕ್ತಿ ತಲೆ ಹಾಕುವಂತಿಲ್ಲ. ಒ.ಟಿ.ಎಸ್.ನ ಪ್ರಕಾರ ಪೂರ್ಣ ಹಣ ಪಾವತಿ ಮಾಡಿದ ನಂತರ ಬ್ಯಾಂಕಿಗೆ ಭದ್ರತೆಯಾಗಿ ನೀಡಿದ ಆಸ್ತಿಯ ಕಾಗದ ಪತ್ರಗಳನ್ನು ಅದರ ವಾರಸುದಾರರಿಗೆ ಹಿಂತಿರುಗಿಸುವುದು ಬ್ಯಾಂಕಿನ ಕರ್ತವ್ಯ. ಭದ್ರತೆಯಾಗಿ ನೀಡಿದ ಆಸ್ತಿಯನ್ನು ಸಾಲಗಾರನ ಸಹೋದರಿ ಅಥವಾ ಇನ್ನಾವುದೇ ವ್ಯಕ್ತಿಯ ಹೆಸರಿನಲ್ಲಿ ನೋಂದಣಿ ಮಾಡಿಕೊಡುವ ಹಕ್ಕು ಬ್ಯಾಂಕಿಗೆ ಇರುವುದಿಲ್ಲ. ಆಸ್ತಿಯನ್ನು ಹರಾಜು ಹಾಕಿದಾಗ ಮಾತ್ರ ಹರಾಜಿನಲ್ಲಿ ಖರೀದಿಸಿದ ವ್ಯಕ್ತಿಯ ಹೆಸರಿನಲ್ಲಿ ಆಸ್ತಿಯನ್ನು ನೋಂದಾಯಿಸಬಹುದು. ಆದ್ದರಿಂದ, ಬ್ಯಾಂಕಿಗಿರುವ ಕಾನೂನಿನ ತೊಡಕನ್ನು ವಿವರಿಸಿ, ಸಾಲಗಾರನ ಸಹೋದರಿಗೆ ಹರಾಜಿನ ಮೂಲಕ ಆಸ್ತಿಯನ್ನು ಖರೀದಿಸಲು ಹೇಳಿ.



# ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಚಂದ್ರಯಾನ 3 ಯಶಸ್ಸಿನ ನಂತರ ಬಾಹ್ಯಾಕಾಶ ಸಂಸ್ಥೆ ಇಸ್ರೋ ಮತ್ತೊಂದು ಖುಷಿಯ ಸುದ್ದಿ ನೀಡಿದ್ದು, ಸೂರ್ಯನ ಅಧ್ಯಯನಕ್ಕಾಗಿ ಸೌರ ಮಿಷನ್ ಉಡಾವಣೆ ಸೆಪ್ಟೆಂಬರ್ 2 ರಂದು ಮಾಡುವುದಾಗಿ ಘೋಷಣೆ ಮಾಡಿದೆ.
- ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಉದಾರ ನೆರವಿನ ಮೂಲಕ ಕೆಲವರ ಬಾಳಿಗೆ ಬೆಳಕಾಗಿದ್ದ ನಟ ಸೋನು ಸೂದ್ ಇದೀಗ ಪೈಲಟ್ ಆಗುವ ವಂಶಿ ಎಂಬ ಯುವಕನೊಬ್ಬನಿಗೆ ಆರ್ಥಿಕ ಸಹಾಯ ಮಾಡಿದ್ದು, ಈಗ ಆತ ಪೈಲಟ್ ಆಗಿ ಹೊರಹೊಮ್ಮಿದ್ದಾನೆ
- ಚಂದ್ರಯಾನ–3 ಮಿಷನ್ನ ಲ್ಯಾಂಡರ್ ವಿಕ್ರಮ್ ಮತ್ತು ರೋವರ್ ಪ್ರಜ್ಞಾನ್ ಚಂದ್ರನ ಮೇಲ್ಮೈಯನ್ನು ಸ್ಪರ್ಶಿಸಿದ್ದು ನಂತರ ಚಂದ್ರನ ನಿರ್ದಿಷ್ಟ ಸ್ಥಳದಲ್ಲಿ ಅಲ್ಲಿನ ರಾಸಾಯನಿಕ ವಿಶ್ಲೇಷಣೆಯನ್ನು ನಡೆಸಲಿದೆ.
- ಬೈಸಿಕಲ್‌ಗಳನ್ನು ಕದ್ದಿದ್ದ ಆರೋಪಿ ಆಂಡರ್ಸನ್ ಪೇಟೆ ನಿವಾಸಿ ಪಾಷಾ ಜಾನ್‌ನನ್ನು ಮೂವತ್ತೆಂಟು ವರ್ಷಗಳ ಬಳಿಕ ಕೆಜಿಎಫ್ ಪೊಲೀಸರು ಬಂಧಿಸಿದ್ದು, ಆತನಿಗೆ ಈಗ ಅರವತ್ತೆರಡು ವರ್ಷ ವಯಸ್ಸಾಗಿದೆ.
- ಲಿಂಗರಾಜಪುರಂನಲ್ಲಿರುವ ಶ್ರದ್ಧಾಂಜಲಿ ಇಂಟಿಗ್ರೇಟೆಡ್ ವಿಶಿಷ್ಟ ಶಾಲೆ ಸುಮಾರು 50 ವರ್ಷಗಳಿಂದ ಕೊಳಗೇರಿಗಳಲ್ಲಿರುವ ವಿಶೇಷಚೇತನ ಮಕ್ಕಳಿಗೆ ಕ್ರೀಡೆ, ಕಲೆ, ಹಾಗೂ ಕರಕುಶಲ ತರಬೇತಿಗಳನ್ನು ನೀಡಿ, ನಿಸ್ವಾರ್ಥ ಸೇವೆ ಸಲ್ಲಿಸುವ ಮೂಲಕ ಆ ಮಕ್ಕಳ ಜೀವನಕ್ಕೆ ಬೆಳಕಾಗಿದೆ.
- ನಮ್ಮ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಚಂದ್ರಯಾನ–3 ಯಶಸ್ಸಿನ ಬೆನ್ನಲ್ಲೇ ಇಡೀ ದೇಶ ಅದರ ಖುಷಿಯಲ್ಲಿದ್ದು, ಯಾದಗಿರಿ ಜಿಲ್ಲೆಯ ಬಾಳಪ್ಪ ಮತ್ತು ನಾಗಮ್ಮ ದಂಪತಿ ತಮಗೆ ಜನಿಸಿದ ಮಗುವಿಗೆ ವಿಕ್ರಮ್ ಎಂದು ಹೆಸರಿಟ್ಟಿದ್ದರೆ, ನಿಂಗಪ್ಪ ಮತ್ತು ಶಿವಮ್ಮ ಅವರಿಗೆ ಜನಿಸಿದ ಮಗುವಿಗೆ ಪ್ರಗ್ಯಾನ್ ಎಂಬ ಹೆಸರನ್ನು ನಾಮಕರಣ ಮಾಡಿದ್ದಾರೆ.
- ನಮ್ಮ ದೇಶವು ಚಂದ್ರ, ಮಂಗಳ ಮತ್ತು ಶುಕ್ರ ಗ್ರಹಗಳಿಗೂ ನೌಕೆಗಳನ್ನು ಕಳಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಎಸ್ ಸೋಮನಾಥ್ ಹೇಳಿದ್ದಾರೆ.

# ಓ ದು ಗ ರ ಅ ನಿ ಸಿ ಕೆ . . .




**ಅರಿವು ಮೂಡಿಸುವ ಕೆಲಸವಾಗಬೇಕಿದೆ :** ಆರ್‌ಬಿಐ ಬ್ಯಾಂಕುಗಳಲ್ಲಿ ಗ್ರಾಹಕರು ಮರೆತಿರುವ, ಹಿರಿಯರು ಹಲವು ವರ್ಷಗಳ ಹಿಂದೆ ಇರಿಸಿರುವ ಠೇವಣಿಗಳನ್ನು ಹುಡುಕಿ, ವಾಪಸ್ ಪಡೆದುಕೊಳ್ಳಲು ನೆರವು ನೀಡುವ ಕೇಂದ್ರೀಕೃತ ಪೋರ್ಟ್‌ಲ್‌ಗೆ ರಿಸರ್ವ್ ಬ್ಯಾಂಕ್ ಚಾಲನೆ ನೀಡಿರುವುದು ಶ್ಲಾಘನೀಯ ಕೆಲಸವಾಗಿದೆ. ಈ ವಿಚಾರವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸವಾಗಬೇಕಿದೆ.

**▸▸ ಅನ್ನಪೂರ್ಣಾ ಮಠಪತಿ, ಧಾರವಾಡ**

**ಗ್ರಾಹಕರ ಹಿತಾಸಕ್ತಿ ರಕ್ಷಿಸಲಿ :** ಸಕಾಲದಲ್ಲಿ ಸಾಲ ತೀರಿಸದ ಗ್ರಾಹಕರ ಮೇಲೆ ದುಬಾರಿ ಬಡ್ಡಿ ಅಥವಾ ದಂಡ ಹೇರುವುದನ್ನು ರಿಸರ್ವ್ ಬ್ಯಾಂಕ್ ನಿರ್ಬಂಧಿಸಿರುವುದು ಸರಿಯಾದದ್ದು. ಇದಕ್ಕಿಂತಲೂ ಮುಖ್ಯವಾಗಿ ಗ್ರಾಹಕರ ಖಾತೆಯಲ್ಲಿ ನಿಗದಿತ ಮೊತ್ತವಿಲ್ಲ ಎಂದು ಬ್ಯಾಂಕುಗಳು ವಿಪರೀತ ದಂಡ ವಿಧಿಸುತ್ತಿವೆ. ಅದಕ್ಕೂ ರಿಸರ್ವ್ ಬ್ಯಾಂಕ್ ನಿರ್ಬಂಧಿಸಿ ಗ್ರಾಹಕರ ಹಿತಾಸಕ್ತಿ ರಕ್ಷಿಸಲಿ ಎಂದು ಕೋರುತ್ತೇನೆ.

**▸▸ ಜನಾರ್ಧನ ಎಂ., ಬೆಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.